ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಹತ್ತಿ ಗಿರಣಿಗಳು

ಶ್ರೀ ಶ್ರೀ ಪಂಪಾಪತಿ (ದಾವಣಗೆರೆ) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು; ಮತ್ತು ಎಷ್ಟು ಕಾಲಾವಧಿಯಿಂದ ಮುಚ್ಚಲ್ಪಟ್ಟಿವೆ ? ಹಾಗೂ ಇದರಿಂದ ಉದ್ಯೋಗ ಕಳೆದುಕೊಂಡಿರುವ ನೌಕರರ ಸಂಖ್ಯೆ ಎಷ್ಟು ?

ಆ) ಈ ಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್.—(ಕಾರ್ಮಿಕ ಮಂತ್ರಿಗಳು)

ಅ) ರಾಜ್ಯದಲ್ಲಿ ಯಾವ ಹತ್ತಿ ಗಿರಣಿಯೂ ಪೂರ್ಣವಾಗಿ ಮುಚ್ಚಿರುವುದಿಲ್ಲ. ಕೇವು ಬೀಗ ಮುದ್ರೆ ಕಾರಣ ಆಥವಾ ಲೇ ಆಫ್ ಕಾರಣ ಆಥವಾ ಯಾವುದೇ ಕಾರಣಕೆಲಸ ಮಾಡುತ್ತಿಲ್ಲ. ಆದುದರಿಂದ ಅಲ್ಲಿನ ಕೆಲಸಗಾರರು ಕೆಲಸ ಕಳೆದುಕೊಂಡಿದ್ದಾರೆಂದು ಹೇಳಲಾಗುವುದಿಲ್ಲ.

ಆ) ಮೇಲಿನ ಉತ್ತರದ ಕಾರಣ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಶ್ರೀ ವಿ. ಲಕ್ಷ್ಮೀಸಾಗರ್,— ನಾಲ್ಕನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ೪ನೆಯ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತವಾಗಿ ನೀಡಲಾದ ಉತ್ತರಗಳು

ಮುಳಬಾಗಿಲು ತಾಲ್ಲೂಕಿನಲ್ಲಿ ಖಾದಿ ಗ್ರಾಮೋದ್ಯೋಗ ಮಂಡಲಿಯ ಘಟಕ ಯೋಜನೆಯ ಸಾಲ ಮತ್ತು ಧನ ಸಹಾಯದ ಬಗ್ಗೆ

೩೬(೧೮೪) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿಯು ವಿಶೇಷ ಘಟಕ ಯೋಜನೆಯಲ್ಲಿ ಮಂಜೂರು ಮಾಡಿರುವ ಘಟಕಗಳ ಸಂಖ್ಯೆ ಎಷ್ಟು, ಹಾಗೂ ಹಾಗಿದ್ದಲ್ಲಿ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆಯೇ ;

ಆ) ಇದೇ ತಾಲ್ಲೂಕಿನಲ್ಲಿ ಯಾವ ಉದ್ದಿಮೆಗಳಿಗೆ ಸಾಲ ಮಂಜೂರು ಮಾಡಿದ್ದೀರಿ, ಮತ್ತು ಅವುಗಳ ಸಂಖ್ಯೆ ಎಷ್ಟು ;

ಇ) ಸಾಲ ಮಂಜೂರಾತಿಗಾಗಿ ಬಂದಿರುವ ಅರ್ಜಿಗಳಲ್ಲಿ ಮಂಜೂರಾತಿ ಪಡೆಯದೆ ಇರುವ ಅರ್ಜಿಗಳ ಸಂಖ್ಯೆ ಎಷ್ಟು ;

ಈ) ಮಂಜೂರಾತಿ ಪಡೆದಿರುವ ಗ್ರಾಮೀಣ ಎಣ್ಣೆ ಕೈಗಾರಿಕೆಗಳ ಸಂಖ್ಯೆ ಎಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) —

ಅ) ೪೭. ಇವುಗಳಲ್ಲಿ ೪ ಘಟಕಗಳು, ಬಡಗಿತನ ಮತ್ತು ಕಮ್ಮಾರಿಕೆಯ ವೈಯಕ್ತಿಕ ಘಟಕಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ೧೭ ಘಟಕಗಳು ವೈಯಕ್ತಿಕ ಚರ್ಮೋದ್ಯೋಗ ಘಟಕಗಳು. ಅವುಗಳಿಗೆ ಕಚ್ಚಾ ಮಾಲು ಮತ್ತು ಸಲಕರಣೆಗಳನ್ನು ಲಿಡ್‌ಕರ್ ಮೂಲಕ ಪೂರೈಸುವ ವಿಷಾಡು ಮಾಡಲಾಗುತ್ತಿದೆ. ೨೭ ಘಟಕಗಳು ಬಿದಿರು ಮತ್ತು ಬೆತ್ತದ ವೈಯಕ್ತಿಕ ಘಟಕಗಳು, ಇವುಗಳಿಗೆ ೧೯೮೫ ರ ಮಾರ್ಚ್ ತಿಂಗಳಲ್ಲಿ ಹಣ ಮಂಜೂರು ಆಗಿದ್ದು ಅವು ಇನ್ನೂ ಕಾರ್ಯಾರಂಭ ಮಾಡಬೇಕಾಗಿದೆ.